ಓಎಸ್ ನಂಃ 403-14
ಪಿಡಬ್ಲ್ಯೂ ಃ 1
ದಿಃ11-12-2015ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.
ಪಾಟೀ ಸವಾಲುಃ ಶ್ರೀ ಸಿಬಿಎಚ್ ವಕೀಲರಿಂದ.

ದೇವಾಲಿಂಗಯ್ಯ ನನ್ನ ತಾತಾನ ತಂದೆ ಆತನನ್ನು ಸೇರಿಸಿರುವ ವಂಶವೃಕ್ಷ ಹಾಜರು ಪಡಿಸಿರುತ್ತೇನೋ ಇಲ್ಲವೋ ನನಗೆ ಗೊತ್ತಿಲ್ಲ, ದೇವಾಲಿಂಗಯ್ಯನ ಹೆಸರಿನಲ್ಲಿ ಈ ದಾವೆಯ ಎಲ್ಲಾ ಆಸ್ತಿಗಳು ಇದ್ದವು, ಆ ಬಗ್ಗೆ ದಾಖಲೆಗಳನ್ನು ಕೊಟ್ಟಿರುತ್ತೇನೆ, ಸದರಿ ದೇವಾಲಿಂಗಯ್ಯ ನಾನು ಚಿಕ್ಕ ಮಗು ಆಗಿದ್ದಾಗ ಮೃತಪಟ್ಟಿರುತ್ತಾನೆ, ಸರ್ವೆ ನಂಃ 50ರಲ್ಲಿ ಒಟ್ಟು ವಿಸ್ತೀರ್ಣ 2 ಎಕರೆ 26 ಗುಂಟೆ ಇರುತ್ತದೆ, ಸರ್ವೆ ನಂಃ 22-02 ಬದಲಾವಣೆ ಆಗಿ ಹೊಸ ನಂಬರ್ 62 ಆಗಿರುತ್ತದೆ ಎಂದು ತೋರಿಸಲು ದಾಖಲೆ ಕೊಟ್ಟಿರುತ್ತೇನೆ, ಸದರಿ ಜಮೀನು ನಮ್ಮ ಕುಟುಂಬಕ್ಕೆ ಸರ್ಕಾರದಿಂದ ಮಂಜುರಾತಿ ಆಗಿರುತ್ತದೆ, ಆ ಬಗ್ಗೆ ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ, ಸರ್ವೆ ನಂಃ 23 ಮತ್ತು 26ರಲ್ಲಿ ನನ್ನ ತಂದೆ, ನನ್ನ ಚಿಕ್ಕ ತಾತಾ ಹಾಗೂ ದೊಡ್ಡ ತಾತಾನಿಗೆ 1/3ನೇ ಭಾಗ ಮಂಜುರಾಗಿರುತ್ತದೆ ಅಂದರೆ ಸರಿಯಲ್ಲ, ನನ್ನ ಹುಟ್ಟಿದ ದಿಃ 23-07-1982 ಆಗಿರುತ್ತದೆ, ದಿಃ 01-02-1984ರಂದು ಹೀರಯ್ಯ ಗಂಗಪ್ಪ ಮತ್ತು ಅಂಜನಪ್ಪರವರ ಮಧ್ಯೆ ವಿಭಾಗ ಪತ್ರ ಆಗಿತ್ತು ಅಂದರೆ ಸರಿ, ಅಂಜನಪ್ಪ ನನ್ನ ತಂದೆ ಅಂದರೆ ಸರಿ, ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.

(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,
ಮಾಗಡಿ.